# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ 2011-12ರಿಂದ 2015-16ರವರೆಗೆ ಮರಳು ಸಾಗಾಣಿಕೆಯಿಂದ ಸಂಗ್ರಹಿಸಿರುವ ರಾಜಧನಕ್ಕನುಗುಣವಾಗಿ ಸಂಬಂಧಿಸಿದ ಗ್ರಾಮ ಪಂಚಾಯತ್‌ಗಳಿಗೆ ನೀಡಬೇಕಾಗಿರುವ ಅನುದಾನ ಬಿಡುಗಡೆ ಬಗ್ಗೆ

**ಓದಲಾಗಿದೆ:**

1. ಆರ್ಥಿಕ ಇಲಾಖೆ, ವೆಚ್ಚ 1 ಶಾಖೆಯ ಕಡತ ಸಂಖ್ಯೆ:ಆಇ 496 ವೆಚ್ಚ 1/2017

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಕಡತದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಐ 84 ಎಂಎಂಎನ್ 2009(3) ದಿನಾಂಕ:2.7.2011ರ Karnataka Minor Mineral Concession (Amendment) Rules 2011ರ ನಿಯಮ 7ರನ್ವಯ ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳ ಸರಹದ್ದಿನಲ್ಲಿ ಮರಳು ಗಣಿಗಾರಿಕೆಯಿಂದ ಸಂಗ್ರಹವಾಗುವ ರಾಜಧನದಲ್ಲಿ ಶೇಕಡ 25%ರಷ್ಟನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ವರ್ಗಾಯಿಸುವಂತೆ ನಿಯಮವನ್ನು ಹೊರಡಿಸಲಾಗಿದೆ. ಅದರಂತೆ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ 2011-12ರಿಂದ 2015-16 ರವರೆಗೆ ಸಂಗ್ರಹಿಸಲಾದ ರಾಜಧನದ ಶೇಕಡ 25%ರ ಅನುದಾನವನ್ನು ವರ್ಗಾಯಿಸುವ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ಸಲ್ಲಿಸಿರುವ ವರದಿಯನ್ವಯ ರೂ.455.59ಲಕ್ಷಗಳನ್ನು ಗ್ರಾಮ ಪಂಚಾಯತ್‌ಗಳಿಗೆ ವರ್ಗಾಯಿಸುವ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 503 ವೆಚ್ಚ6/2017 ದಿನಾಂಕ: 29ನೇ ಜನವರಿ 2018

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1ರ ರೀತ್ಯ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯ ತಾಲ್ಲೂಕು ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್‌ಗಳಿಗೆ ಲಿಂಕ್ ಡಾಕ್ಯುಮೆಂಟ್ ಲೆಕ್ಕ ಶೀರ್ಷಿಕೆ 2515-00-103-0-94 (ಯೋಜನೇತರ)ಅಡಿ-2011-12 ರಿಂದ 2015-16ರವರೆಗೆ ಮರಳು ಸಾಗಾಣಿಕೆಯಿಂದ ಸಂಗ್ರಹವಾದ ರಾಜಧನಕ್ಕನುಗುಣವಾಗಿ ಸಂಬಂಧಿಸಿದ ಗ್ರಾಮ ಪಂಚಾಯತ್‌ಗಳಿಗೆ ನೀಡಬೇಕಾದ ಒಟ್ಟು ರೂ.455.59ಲಕ್ಷ (ರೂಪಾಯಿ ನಾಲ್ಕು ನೂರ ಐವತ್ತೊಂಬತ್ತು ಲಕ್ಷದ ಐವತ್ತೊಂಬತ್ತು ಸಾವಿರಗಳು ಮಾತ್ರ)ಗಳನ್ನು ಲೆಕ್ಕ ಶೀರ್ಷಿಕೆ 2515-00-198-1-10-300 (ಯೋಜನೇತರ) ಅಡಿ ಬಿಡುಗಡೆಗೊಳಿಸಿದೆ (ಗ್ರಾಮ ಪಂಚಾಯತ್‌ಗಳ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ).

ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು ತಾಲ್ಲೂಕುವಾರು ಹಂಚಿಕೆ ಮಾಡುವುದು. ತಾಲ್ಲೂಕು ಪಂಚಾಯತ್‌ಗಳು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳಿಗೆ ಅನುಬಂಧ-2ರಲ್ಲಿನ ಹಂಚಿಕೆಯನ್ವಯ ಬಿಲ್ಲನ್ನು ತಯಾರಿಸಿ ಖಜಾನೆ ಸಲ್ಲಿಸಿ ತೀರ್ಣಗೊಳಿಸಲು ಕ್ರಮವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.),
ಆರ್ಥಿಕ ಇಲಾಖೆ

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
3. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಸಂಬಂಧಪಟ್ಟ ಜಿಲ್ಲಾ ಖಜಾನೆ ಅಧಿಕಾರಿಗಳು
6. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು

| ಸರ್ಕಾರದ ಆದೇಶ ಸಂಖ್ಯೆ: ಆಇ 503 ವೆಚ್ಚ 6/2017 ದಿನಾಂಕ:29.1.2018ಕ್ಕೆ ಅನುಬಂಧ | | | | | | | | |
|---|---|---|---|---|---|---|---|---|
| | | | | | | | | (ರೂ.ಲಕ್ಷಗಳಲ್ಲಿ) |
| | | | ವರ್ಷ – ವರ್ಗಾಯಿಸಬಹುದಾದ ತಾಲ್ಲೂಕುವಾರು ರಾಜಧನ | | | | | ಒಟ್ಟು |
| ಕ್ರ.ಸಂ. | ಜಿಲ್ಲೆ | ತಾಲ್ಲೂಕು | **2011–12** | **2012–13** | **2013–14** | **2014–15** | **2015–16** | |
| 1 | ಉತ್ತರ ಕನ್ನಡ | ಅಂಕೋಲ | 0.06 | 0.80 | 0.57 | 2.25 | 2.48 | 6.16 |
| 2 | | ಜೋಯಿಡಾ | 0.81 | 0.96 | 0.15 | 0.00 | | 1.92 |
| | | ಕಾರವಾರ | | 2.85 | 2.24 | 16.35 | 22.67 | 44.11 |
| | | ಕುಮಟ | | 1.13 | 2.10 | 9.75 | 26.58 | 39.56 |
| | | ಹೊನ್ನಾವರ | | 7.43 | 14.97 | 25.65 | 42.08 | 90.13 |
| | | ಸಿರ್ಸಿ | | 0.08 | 0.08 | | | 0.16 |
| | | **ಒಟ್ಟು** | **0.87** | **13.25** | **20.11** | **54.00** | **93.81** | **182.04** |
| 3 | ದಕ್ಷಿಣ ಕನ್ನಡ | ಮಂಗಳೂರು | | 10.01 | 19.84 | 2.25 | | 32.10 |
| | | ಬಂಟ್ವಾಳ | | 3.05 | 4.23 | 0.90 | | 8.18 |
| | | ಬೆಳ್ತಂಗಡಿ | | 2.63 | 1.75 | 0.30 | | 4.68 |
| | | ಪುತ್ತೂರು | | 2.75 | 3.55 | 0.60 | | 6.90 |
| | | ಸುಳ್ಯ | | 1.45 | 0.90 | 0.00 | | 2.35 |
| | | | **0.00** | **19.89** | **30.27** | **4.05** | **0.00** | **54.21** |
| 4 | ಉಡುಪಿ | ಉಡುಪಿ | | 18.15 | 20.25 | 11.88 | 81.60 | 131.88 |
| | | ಕಾರ್ಕಳ | | 1.48 | 0.98 | 0.00 | 0.00 | 2.46 |
| | | ಕುಂದಾಪುರ | | 13.94 | 15.53 | 8.28 | 47.25 | 85.00 |
| | | **ಒಟ್ಟು** | **0.00** | **33.57** | **36.76** | **20.16** | **128.85** | **219.34** |
| | **ಒಟ್ಟಾರೆ ಸಿ.ಆರ್.ಝಡ್ ರಡಿ** | | **0.87** | **66.71** | **87.14** | **78.21** | **222.66** | **455.59** |